ವಿಶ್ವವಾಣಿ
ವಿಶ್ವಾಸವೇ ವಿಶ್ವ

**ದಾರಿದೀಪೋಕ್ತಿ**
ನನ್ನಿಂದಾಗದು ಎಂದು ಕೈಚೆಲ್ಲಲು ಇನ್ನೂ ನಿರ್ಧರಿಸಿಲ್ಲ ಅಂದ್ರೆ, ನಿಮಗೆ ಇನ್ನೂ ಅವಕಾಶ ಇದೆ ಎಂದರ್ಥ. ನಿಮ್ಮ ನಿರ್ಧಾರ ಎಂಥ ಅದ್ಭುತ ಬದಲಾವಣೆಯನ್ನಾದರೂ ತರಬಲ್ಲುದು. ಕೊನೇಕ್ಷಣದ ಪ್ರಯತ್ನ ಚಮತ್ಕಾರಿಕ ಫಲಿತಾಂಶವನ್ನು ನೀಡಬಹುದು.

**ವಕ್ರತುಂಡೋಕ್ತಿ**
ಗಂಡನ ಮುಂದೆ ಹೆಂಡತಿಯಾದವಳು ಸಮಸ್ಯೆಗಳನ್ನು ಹೇಳಿಕೊಳ್ಳಬೇಕು. ಗಂಡನೇ ಒಂದು ಸಮಸ್ಯೆ ಎಂದು ಭಾವಿಸಬಾರದು.

**ಕನೌಜ್‌ನಿಂದ ಎಸ್‌ಪಿ ನಾಯಕ ಅಖಿಲೇಶ್ ಸ್ಪರ್ಧೆ**



- ಈ ಮೊದಲು ತೇಜ್‌ಪ್ರತಾಪ್‌ಗೆ ಟಿಕೆಟ್ ಘೋಷಣೆ
- ಮನಸ್ಸು ಬದಲಿಸಿ ತಾನೇ ಕಣಕ್ಕಿಳಿದ ಅಖಿಲೇಶ್ ಯಾದವ್
- ಉತ್ತರ ಪ್ರದೇಶದಲ್ಲಿ ಹೆಚ್ಚು ಸ್ಥಾನ ಗೆಲ್ಲುವ ಸಲುವಾಗಿ ಕಣಕ್ಕೆ

**ಪುಟ ತೆರೆದಂತೆ...**
ಸಂದೇಶಖಾಲಿ ಇಡೀ ಜಗತ್ತಿಗೆ ಕಳಿಸಿದ ಸಂದೇಶ ಮಾತ್ರ ಖಾಲಿಖಾಲಿ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6
ದಯವಿಟ್ಟು ಇಲ್ಲಿ ಪ್ರಾಣಿಗಳಂತೆ ವರ್ತಿಸಿ!
ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
ಸಂ.ಗಮ | 7

ಅಮೆರಿಕದಲ್ಲಿನ ಪಿತ್ರಾರ್ಜಿತ ಆಸ್ತಿ ಹಂಚಿಕೆ ಹೇಳಿಕೆ । ಕಾಂಗ್ರೆಸ್ ಪೇಚಿಗೆ ಸಿಲುಕಿಸಿದ ರಾಹುಲ್ ಆಪ್ತ । ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಪ್ರಸ್ತಾಪ

# ಬಿಜೆಪಿಗೆ ಪಿತ್ರೋಡಾ ಅಸ್ತ್ರ

**ದೆಹಲಿ:** ನೀವು ಜೀವಂತ ಇದ್ದಾಗಲೂ ಮತ್ತು ಸತ್ತ ಮೇಲೂ ನಿಮ್ಮ ಮೇಲೆ ತೆರಿಗೆ ಹಾಕಿ ಲೂಟಿ ಮಾಡಲು ಕಾಂಗ್ರೆಸ್ ನೋಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ನೇರವಾಗಿ ಆರೋಪಿಸಿದ್ದಾರೆ.

ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದಲ್ಲಿ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಅವರು, ಸಾಗರೇತರ ಕಾಂಗ್ರೆಸ್ ಘಟಕದ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಅವರ ಪಿತ್ರಾರ್ಜಿತ ಆಸ್ತಿ ಹಂಚಿಕೆಯ ಹೇಳಿಕೆಯನ್ನು ಪ್ರಸ್ತಾಪಿಸಿ, ಕೈ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಈ ಹಿಂದೆಯೇ ಕಾಂಗ್ರೆಸ್ ನಿಮ್ಮ ಆಸ್ತಿಯನ್ನು ಹಂಚಿಕೆ ಮಾಡಲು ನೋಡುತ್ತಿದೆ ಎಂದು ಹೇಳಿದ್ದೆ. ಈಗ ಸ್ಯಾಮ್ ಪಿತ್ರೋಡಾ ಅವರ ಹೇಳಿಕೆಯಿಂದ ಅದು ಖಚಿತವಾಗಿದೆ ಎಂಬರ್ಥ ದಲ್ಲಿ ಮಾತನಾಡಿದ್ದಾರೆ.

ಸ್ಯಾಮ್ ಪಿತ್ರೋಡಾ ಅವರ ಹೇಳಿಕೆ ಕಾಂಗ್ರೆಸ್ ಅನ್ನು ಪೇಚಿಗೆ ಸಿಲುಕಿಸಿದ್ದರೆ, ಬಿಜೆಪಿಗೆ ಹೊಸ ಅಸ್ತ್ರವೇ ಸಿಕ್ಕಂತಾಗಿದೆ. ಕಳೆದ 3 ದಿನ ಗಳಿಂದಲೂ ಮೋದಿ ಅವರು, ರಾಹುಲ್ ಅವರ ಸಂಪತ್ತಿನ ಹಂಚಿಕೆ ಹೇಳಿಕೆ ಉಲ್ಲೇಕಿಸಿ ವಾಗ್ದಾಳಿ ನಡೆಸುತ್ತಿದ್ದರು. ಈಗ ಪಿತ್ರೋಡಾ ಹೇಳಿಕೆ ಅದಕ್ಕೆ ತುಪ್ಪ ಸುರಿದಂತಾಗಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

**ಮೋದಿ ಹೇಳಿದ್ದು:** ಪಿತ್ರೋಡಾ ಅವರ ಹೇಳಿಕೆಯಿಂದಾಗಿ ಕಾಂಗ್ರೆಸ್‌ನ ಅಪಾಯಕಾರಿ ಮನಸ್ಥಿತಿಗಳು ಒಂದೊಂದಾಗಿ ಅನಾ ವರಣವಾಗುತ್ತಿವೆ. ಈಗ ಜನಸಾಮಾನ್ಯರ ಮೇಲೆ ಪಿತ್ರಾರ್ಜಿತ ತೆರಿಗೆ ಹಾಕಲು ನೋಡುತ್ತಿದೆ. ಅಲ್ಲದೆ, ಶಾಹಿ ಪರಿವಾರದ ಯುವರಾಜನ ಸಲಹೆಗಾರ ಮತ್ತು ಯುವರಾಜನ ತಂದೆಯ ಸಲಹೆಗಾರನಾಗಿದ್ದ ವ್ಯಕ್ತಿಯೊಬ್ಬರು ಹಿಂದೆ ಮಧ್ಯಮ ವರ್ಗದ ಮೇಲೆ ಹೆಚ್ಚು ತೆರಿಗೆ ಹಾಕಬೇಕು ಎಂದಿದ್ದರು. ಈಗ ಪೋಷಕರಿಂದ ಪಿತ್ರಾರ್ಜಿತವಾಗಿ ಬರುವ ಆಸ್ತಿ ಮೇಲೂ ಕಾಂಗ್ರೆಸ್ ಕಣ್ಣು ಹಾಕಿದ್ದು, ತಮ್ಮ ಹಸ್ತದಿಂದ ಕಿತ್ತುಕೊಳ್ಳಲು ನೋಡುತ್ತಿದೆ ಎಂದು ಆರೋಪಿಸಿದ್ದಾರೆ.

**ನಾನು ಹಾಗೆ ಹೇಳೇ ಇಲ್ಲ**



ತಮ್ಮ ಹೇಳಿಕೆ ಬಗ್ಗೆ ಸ್ಪಷ್ಟನೆ ನೀಡಿರುವ ಪಿತ್ರೋಡಾ, ಪಿತ್ರಾರ್ಜಿತ ತೆರಿಗೆ ಹಾಕಬೇಕು ಎಂದಿಲ್ಲ. ಅದನ್ನು ಅಮೆರಿಕದಲ್ಲೇ ಟಿವಿ ಜತೆ ಮಾತನಾಡುವಾಗ ಉಲ್ಲೇಖಿಸಿದ್ದೆ. ಇದಕ್ಕೂ ಭಾರತಕ್ಕೂ ಯಾವುದೇ ಸಂಬಂಧವಿಲ್ಲ ಎಂದಿದ್ದಾರೆ. ಅಲ್ಲದೆ, ಕೆಲವು ಮಾಧ್ಯಮಗಳು ನನ್ನ ಹೇಳಿಕೆಯನ್ನು ತಿರುಚಿವೆ ಎಂದು ಕಿಡಿಕಾರಿದ್ದಾರೆ.



ಮಧ್ಯಪ್ರದೇಶ, ಛತ್ತೀಸ್‌ಗಡದಲ್ಲಿ ಪ್ರಚಾರ ನಡೆಸಿದ ನರೇಂದ್ರ ಮೋದಿ.

**ಧರ್ಮಾಧಾರಿತ ಮೀಸಲು ತಪ್ಪು**

ಇದರ ಜತೆಯಲ್ಲೇ ಎಲ್ಲ ಮುಸ್ಲಿಮರಿಗೆ ಮೀಸಲು ನೀಡಲು ಮುಂದಾಗಿರುವ ಕರ್ನಾಟಕದ ಕ್ರಮಕ್ಕೂ ಮೋದಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ ಧರ್ಮಾಧಾರಿತ ಮೀಸಲು ನೀಡಲು ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಕರ್ನಾಟಕದಲ್ಲಿ ಶೇ.12ರಷ್ಟಿರುವ ಮುಸ್ಲಿಮರಿಗೆ ಮೀಸಲು ನೀಡಲು ಅಲ್ಲಿನ ಕಾಂಗ್ರೆಸ್ ಸರಕಾರ ನಿರ್ಧರಿಸಿದೆ. ಈ ಮೂಲಕ ಒಬಿಸಿ ಮೀಸಲು ಕಸಿಯಲು ನೋಡುತ್ತಿದೆ ಎಂದು ಆರೋಪಿಸಿದ್ದಾರೆ.

**ಕಾಂಗ್ರೆಸ್‌ನಿಂದ ತಿರುಗೇಟು**

ಪಿತ್ರಾರ್ಜಿತ ಆಸ್ತಿ ಸಂಬಂಧ ಬಿಜೆಪಿ ನಾಯಕರ ಹೇಳಿಕೆಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಿರುಗೇಟು ನೀಡಿದ್ದಾರೆ. 1985ರಲ್ಲಿ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ ಈ ಪಿತ್ರಾರ್ಜಿತ ತೆರಿಗೆಯನ್ನು ತೆಗೆದುಹಾಕಿದ್ದೇವೆ. ಆದರೆ, ಇದನ್ನು ವಾಪಸ್ ತರಬೇಕು ಎಂದು ಹಿಂದಿನ ಸಹಾಯಕ ವಿತ್ತ ಸಚಿವ ಜಯಂತ್ ಸಿನ್ಹಾ ಅವರ ಹೇಳಿಕೆ, ಅರುಣ್ ಜೇಟ್ಲಿ ಅವರು ಈ ತೆರಿಗೆಯನ್ನು ಹೊಗಳಿದ್ದನ್ನೂ ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲ, 2017ರಲ್ಲಿ ಬಿಜೆಪಿ ಸರಕಾರ ಇದನ್ನು ಮರುಜಾರಿಗೆ ನೋಡಿತ್ತು ಎಂದಿದ್ದಾರೆ.

ನಾಳೆ 14 ಕ್ಷೇತ್ರಗಳಲ್ಲಿ ಮತದಾನ । ಬಹಿರಂಗ ಪ್ರಚಾರಕ್ಕೆ ನಿನ್ನೆ ಸಂಜೆ 6 ಗಂಟೆಗೆ ತೆರೆ । ಅಭ್ಯರ್ಥಿಗಳಿಗೆ ಇಂದು ನಿರ್ಣಾಯಕ ದಿನ

# ಇಂದು ಮನೆ ಮನೆ ಪ್ರಚಾರ

**ಬೆಂಗಳೂರು:** ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ-ಜೆಡಿಎಸ್ ಮಿತ್ರಪಕ್ಷಗಳಿಗೆ ಪ್ರತಿಷ್ಠೆಯ ಕಣವಾಗಿರುವ ಲೋಕಸಭೆ ಚುನಾವಣೆ ಮೊದಲ ಹಂತದ 14 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ಬುಧವಾರ ಸಂಜೆ 5 ಗಂಟೆಗೆ ತೆರೆ ಬಿದ್ದಿದೆ.

ಶುಕ್ರವಾರ (ಏ. 26) ಬೆಳಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಈ ಕ್ಷೇತ್ರಗಳಲ್ಲಿ ಮತದಾನ ನಡೆಯ ಲಿದೆ. ಮತದಾನಕ್ಕೆ ಮುನ್ನಾದಿನವಾದ ಗುರುವಾರ (ಏ. 25) ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಪಾಲಿಗೆ ನಿರ್ಣಾಯಕ ದಿನವಾಗಿದ್ದು, ಮತದಾರರ ಮನವೊಲಿಕೆಗೆ ತನು-ಮನ-ಧನ-ಮದ್ಯದೊಂದಿಗೆ ಕಸರತ್ತು ಮಾಡಲಿದ್ದಾರೆ. ಬಹಿರಂಗ ಪ್ರಚಾರಕ್ಕೆ ತೆರೆ ಬೀಳುತ್ತಿದ್ದಂತೆ ಕ್ಷೇತ್ರದ ಮತದಾರರಲ್ಲದ ರಾಜಕೀಯ ನಾಯಕರು, ಕಾರ್ಯಕರ್ತರು ಕ್ಷೇತ್ರ ಬಿಟ್ಟು ತೆರಳಿದ್ದಾರೆ. → 8

**ಇಂದು ನಿರ್ಣಾಯಕ ಪ್ರಚಾರ**

ಸಾಮಾನ್ಯವಾಗಿ ಮತದಾನದ ಮುನ್ನಾ ದಿನದ ಮನೆ ಮನೆ ಪ್ರಚಾರವೇ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರ ಪಾಲಿಗೆ ನಿರ್ಣಾಯಕ. ಈ 24 ಗಂಟೆಗಳಲ್ಲಿ ಮತದಾರರನ್ನು ಸೆಳೆಯಲು ನಾನಾ ಕಸರತ್ತುಗಳನ್ನು ನಡೆಸಲಾಗುತ್ತದೆ. ಆಯ್ದ ಮತದಾರರಿಗೆ ಆಮಿಷ ಒಡ್ಡುವುದರ ಜತೆಗೆ, ಉಡುಗೊರೆ, ಮದ್ಯ ಪೂರೈಕೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಆಯೋಗ ಎಲ್ಲಾ ಕ್ಷೇತ್ರಗಳಲ್ಲೂ ಹದ್ದಿನ ಕಣ್ಣಿಟ್ಟಿದ್ದು, ಅಕ್ರಮಗಳನ್ನು ತಡೆಗಟ್ಟಲು ಹೆಚ್ಚುವರಿ ಪೊಲೀಸ್ ಪಡೆಗಳೊಂದಿಗೆ ಸಜ್ಜಾಗಿದೆ. ಆಯಕಟ್ಟಿನ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಿದ್ದು, ಕೆಲವೆಡೆ ಮನೆ ಮನೆಗೆ ತೆರಳುವ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರನ್ನು ತಪಾಸಣೆ ಮಾಡಲು ನಿರ್ಧರಿಸಲಾಗಿದೆ.

ಧಾಟಿ ಪ್ರಶ್ನಿಸಿದ್ದ ಅರ್ಜಿ ವಜಾ ಮಾಡಿದ ಹೈಕೋರ್ಟ್

# ನಾಡಗೀತೆ ಧಾಟಿ ಸರಕಾರಕ್ಕೆ ಜಯ

**ಬೆಂಗಳೂರು:** ನಾಡಗೀತೆಯನ್ನು ಖ್ಯಾತ ಸಂಗೀತ ಸಂಯೋಜಕ ದಿ.ಮೈಸೂರು ಅನಂತಸ್ವಾಮಿ ಸಂಯೋಜಿಸಿದ್ದ ಧಾಟಿಯಲ್ಲಿ ಹಾಡುವುದನ್ನು ಕಡ್ಡಾಯಗೊಳಿಸಿ ಸರಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ನಾಡಗೀತೆಯನ್ನು ಮೈಸೂರು ಅನಂತಸ್ವಾಮಿ ಅವರ ರಾಗ ಸಂಯೋಜನೆಯಂತೆ 2 ನಿಮಿಷ 30 ಸೆಕೆಂಡ್‌ಗಳ ಕಾಲ ಹಾಡಬೇಕು ಎಂದು ಸರಕಾರ ಹೊರಡಿಸಿದ್ದ ಆದೇಶ ಪ್ರಶ್ನಿಸಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರಕಾರ ಹೊರಡಿಸಿರುವ ಆದೇಶ ಪ್ರಶ್ನಿಸಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. → 8

ಮೋದಿಯವರ ಮಾಂಗಲ್ಯ ಸೂತ್ರ ಹೇಳಿಕೆಗೆ ಖರ್ಗೆ ಖಂಡನೆ । ಮಹಿಳೆಯರ ಪರ ಕಾಂಗ್ರೆಸ್‌ನಿಂದ ಹಲವಾರು ಕಾರ್ಯಕ್ರಮ । ಎಐಸಿಸಿ ಅಧ್ಯಕ್ಷರ ಸಮರ್ಥನೆ

# ನಾವು ಮಾಂಗಲ್ಯ ಕಿತ್ತುಕೊಂಡಿಲ್ಲ

**ಕಲಬುರಗಿ:** ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹಿಳೆಯರ ಮಾಂಗಲ್ಯ ಸೂತ್ರ ಕಿತ್ತುಕೊಳ್ಳುತ್ತದೆ ಎಂದು ಹೇಳಿರುವ ಪ್ರಧಾನಿ ಮೋದಿ ಅವರಿಗೆ ನಾಚಿಕೆಯಾಗಬೇಕು ಎಂದು ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಬುಧವಾರ ಜಿಲ್ಲೆಯ ಅಫಜಲಪುರ ಪಟ್ಟಣದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಕಾಂಗ್ರೆಸ್ ಅಭ್ಯರ್ಥಿ ರಾಧಾಕೃಷ್ಣ ಅವರ ಪರ ಮತಯಾಚಿಸಿ ಅವರು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಮಹಿಳೆಯರ ಮಾಂಗಲ್ಯ ಸೂತ್ರ ಕಿತ್ತುಕೊಳ್ಳುತ್ತೆ ಎನ್ನುವ ಇವರೆಂತಹ ಪ್ರಧಾನಿ, ಕಾಂಗ್ರೆಸ್ ಮಹಿಳೆಯರಿಗಾಗಿ ಹಲ ವಾರು ಯೋಜನೆ ಜಾರಿಗೆ ತಂದಿದೆ ಹೊರತು, ಮಾಂಗಲ್ಯ ಸೂತ್ರ ಕಿತ್ತುಕೊಳ್ಳುವ ಕೆಲಸ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.


**ಭಾವುಕರಾದ ಖರ್ಗೆ**



ತವರು ಮತದಾರರ ಮುಂದೆ ಖರ್ಗೆ ಅವರು ಭಾವುಕರಾದರು. ನಾವು ಮಾಡಿದ ಕೆಲಸಕ್ಕೆ ನೀವು ಆಶೀರ್ವಾದ ಮಾಡಿ ರಾಧಾಕೃಷ್ಣ ಅವರಿಗೆ ಗೆಲ್ಲಿಸ ಬೇಕು. ನೀವು ಹಾಗೆ ಮಾಡದಿದ್ದರೆ ನಿಮ್ಮ ಹೃದಯದಲ್ಲಿ ನಾನು ಇಲ್ಲ ಎಂದು ತಿಳಿದುಕೊಳ್ಳುತ್ತೇನೆ. ನಾನು ಸತ್ತರೆ ನನ್ನ ಮಣ್ಣಿಗೆ ನೀವು ಬರಬೇಕು. ನನ್ನನ್ನು ಸುಟ್ಟರೇ ಮೇಣದ ಬತ್ತಿ ಹಚ್ಚಲು ಬನ್ನಿ. ಇದಕ್ಕಿಂತ ಹೆಚ್ಚಿಗೆ ನಾನು ಹೇಳುವುದಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಭಾವುಕರಾಗಿ ನುಡಿದರು.

ವಿವಿಪ್ಯಾಟ್ ಅರ್ಜಿದಾರರಿಗೆ ಸುಪ್ರೀಂ ಖಡಕ್ ಎಚ್ಚರಿಕೆ

# ನಾವು ಚುನಾವಣೆಗಳ ನಿಯಂತ್ರಣ ಮಾಡಲ್ಲ!



**ದೆಹಲಿ:** ಸಾಂವಿಧಾನಿಕ ಪ್ರಾಧಿಕಾರವಾಗಿರುವ ಚುನಾವಣಾ ಆಯೋಗವನ್ನು ನಿಯಂತ್ರಿಸಲು ಆಗಲ್ಲ ಎಂದು ಸುಪ್ರೀಂ ಕೋರ್ಟ್ ಖಡಕ್ಕಾಗಿ ಹೇಳಿದೆ.

ಇವಿಎಂಗಳಲ್ಲಿನ ವಿವಿಪ್ಯಾಟ್‌ಗಳನ್ನು ಸಂಪೂರ್ಣವಾಗಿ ಎಣಿಸ ಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ, ನ್ಯಾಯಪೀಠವು ಕೇವಲ ಅನುಮಾನದ ಮೇಲೆ ಕಾರ್ಯನಿರ್ವಹಿಸಬಹುದೇ ಎಂದು ಪ್ರಶ್ನಿಸಿತು. ವಿಚಾರಣೆ ಮುಗಿಸಿರುವ ಪೀಠವು, ತೀರ್ಪನ್ನು ಕಾಯ್ದಿರಿಸಿತು. → 8

ವಿವಾದಕ್ಕೆ ಕಾರಣವಾದ ರಾಜಕೀಯವಾಗಿ ದೊಡ್ಡ ಕುಟುಂಬವೊಂದರ ಕುಡಿ । ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

# ಲೋಕ ಚುನಾವಣೆ ವೇಳೆ ರಾಸಲೀಲೆ ವಿಡಿಯೋ, ಚಿತ್ರಗಳು ಬಹಿರಂಗ!

**ಬೆಂಗಳೂರು:** ಲೋಕಸಭೆ ಚುನಾವಣೆಗೆ ಕ್ಷಣಗಣನೆ ಆರಂಭವಾಗುತ್ತಿರುವ ವೇಳೆ ರಾಜ್ಯ ರಾಜಕೀಯ ದಲ್ಲಿ ದೊಡ್ಡ ಕುಟುಂಬದ ಕುಡಿಯೊಂದು ರಾಸಲೀಲೆಯಲ್ಲಿ ತೊಡಗಿರುವ ಅಶ್ಲೀಲ ಚಿತ್ರಗಳು ಮತ್ತು ವಿಡಿಯೋಗಳು ಭಾರೀ ವಿವಾದಕ್ಕೆ ಕಾರಣ ವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ವಾಟ್ಸಾಪ್‌ಗಳಲ್ಲಿ ಈ ಚಿತ್ರ ಮತ್ತು ವಿಡಿಯೋಗಳು ವೈರಲ್ ಆಗಿ ಭಾರಿ ಚರ್ಚೆಗೆ ಕಾರಣವಾಗಿದೆ.

ಈ ಕುರಿತ ವಿಡಿಯೋಗಳು ಈಗಾಗಲೇ ಬಹಿರಂಗ ವಾಗಿದೆ. ವಿಶೇಷವೆಂದರೆ, ಕೃತ್ಯ ಎಸಗಿದ ದೊಡ್ಡ ರಾಜಕೀಯ ಕುಟುಂಬದ ಕುಡಿಯೇ ತನ್ನೆಲ್ಲಾ ಕೃತ್ಯಗಳನ್ನು ರೇಕಾರ್ಡ್ ಮಾಡಿರುವುದು. ಈ ವಿಡಿಯೋ ದಲ್ಲಿ ಆ ವ್ಯಕ್ತಿಯ ಜಿಲ್ಲೆಯ ಹಲವು ಗೌರವಾನ್ವಿತ ಕುಟುಂಬದ ಹೆಣ್ಣುಮಕ್ಕಳೂ ಇದ್ದಾರೆ.

ಲೋಕಸಭೆ ಚುನಾವಣೆ ವೇಳೆ ಈ ವಿಡಿಯೋ ಬಹಿರಂಗವಾಗಿದ್ದು, ಇದರಿಂದ ಚುನಾವಣೆ ಸಂದರ್ಭದಲ್ಲಿ ಪಕ್ಷಗಳು ಭಾರಿ ಮುಜುಗರ ಎದುರಿಸುವಂತಾಗಿದೆ. ಅಲ್ಲದೆ, ಈ ವಿಡಿಯೋ ಆಧರಿಸಿಯೇ ಎದುರಾಳಿ ಪಕ್ಷದವರು ಕ್ಷೇತ್ರದಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಇಂಥವರು ನಿಮ್ಮ ಪ್ರತಿನಿಧಿಯಾಗಲು ಅರ್ಹರಾ ಎಂದು ಮತದಾರರನ್ನು ಪ್ರಶ್ನಿಸುತ್ತಿದ್ದಾರೆ.

ಈ ಜಿಲ್ಲೆಗೆ ನಾವೇ ಸಾರ್ವಭೌಮರು. ನಮ್ಮನ್ನು ಬಿಟ್ಟರೆ ಬೇರೆಯವರಿಲ್ಲ. ನಮ್ಮ ಪಕ್ಷ ಮತ್ತು ಕುಟುಂಬವನ್ನು ನಾಶ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವ ನಾಯಕರ ಪಕ್ಷದಲ್ಲಿ ಆ ನಾಯಕರೊಬ್ಬರ ಕುಡಿಯೇ ಈ ರೀತಿಯ ಕೃತ್ಯದಲ್ಲಿ ತೊಡಗಿರುವುದು ಸ್ವಪಕ್ಷೀಯರಲ್ಲೇ ತೀವ್ರ ಬೇಸರ ಮತ್ತು ಜುಗುಪ್ಸೆಯನ್ನು ತರಿಸಿದೆ. ಮಾತ್ರವಲ್ಲ, ಅದನ್ನು ಬಹಿರಂಗವಾಗಿಯೂ ಹೇಳಿಕೊಳ್ಳುತ್ತಿದ್ದಾರೆ.

ತನ್ನ ತಾಯಿ ವಯಸ್ಸಿನ, ತನಗೆ ಊಟವಿಕ್ಕುವ ಮಹಿಳೆಯನ್ನು ಬಲಾತ್ಕಾರವಾಗಿ ಲೈಂಗಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಾರೆ. ಆ ವ್ಯಕ್ತಿಯಿಂದ ತೊಂದರೆಗೊಳಗಾದವರಲ್ಲಿ ಜಿಲ್ಲೆಯ ಗೌರವಸ್ಥ ಕುಟುಂಬದ ಹಲವಾರು ಅಮಾಯಕ ಹೆಣ್ಣುಮಕ್ಕಳು, ಜಿಲ್ಲಾ ಪಂಚಾಯಿತಿ ಸದಸ್ಯೆ, ಅಧಿಕಾರಿಯೂ ಇದ್ದಾರೆ. ಬೆಂಗಾವಲು ಪಡೆಯಲ್ಲಿದ್ದ ಮಹಿಳಾ ಪೊಲೀಸರನ್ನೂ ಬಿಟ್ಟಿಲ್ಲ ಎಂಬ ಆರೋಪ ಕೇಳಿಬರುತ್ತಿದೆ. → 8

- ಸದ್ಯ ಆ ಜಿಲ್ಲೆಯಲ್ಲಿ ಚುನಾವಣಾ ವಸ್ತುವಾಗಿರುವ ಅಶ್ಲೀಲ ದೃಶ್ಯಗಳು
- ತನ್ನ ಕೃತ್ಯಗಳನ್ನು ತಾನೇ ರೆಕಾರ್ಡ್ ಮಾಡಿರುವ ವಿವಾದಿತ ರಾಜಕಾರಣಿ




ಮೋದಿ ಸರಕಾರ

ಕಳೆದ 10 ವರ್ಷಗಳು
- ಮೊಬೈಲ್ ಉತ್ಪಾದನೆಯೇ ಇಲ್ಲದ ಸ್ಥಿತಿಯಿಂದ, ವಿಶ್ವದ ಎರಡನೇ ಅತಿದೊಡ್ಡ ತಯಾರಕರಾಗಿದ್ದೇವೆ
- ದುರ್ಬಲ 5ನೇ ಆರ್ಥಿಕತೆಯಿಂದ ಟಾಪ್ 5 ನೇ ಆರ್ಥಿಕ ಶಕ್ತಿಯಾಗಿ ಮಾಡಲಾಗಿದೆ
- 4 ಕೋಟಿಗೂ ಅಧಿಕ ಪಕ್ಕಾ ಮನೆಗಳ ನಿರ್ಮಾಣ ಮಾಡಿದ್ದೇವೆ
- 10 ಕೋಟಿಗೂ ಅಧಿಕ ಗೃಹಿಣಿಯರಿಗೆ ಗ್ಯಾಸ್ ಸಿಲಿಂಡರ್‌ಗಳನ್ನು ನೀಡಿದ್ದೇವೆ
- 8 ಕೋಟಿಗೂ ಅಧಿಕ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲಾಗಿದೆ
- ಮಂಗಳಯಾನ, ಚಂದ್ರಯಾನ ಮತ್ತು ಆದಿತ್ಯ ಎಲ್-1 ಮಿಷನ್ ತಮ್ಮ ಶಕ್ತಿಯನ್ನು ತೋರಿಸಿವೆ
- 100ಕ್ಕೂ ಅಧಿಕ ನಗರಗಳಿಗೆ ವಂದೇ ಭಾರತ್ ರೈಲು ಸೇವೆಗಳ ಮೂಲಕ ಭಾರತೀಯ ರೈಲ್ವೆಯನ್ನು ವಿಶ್ವದರ್ಜೆಗೇರಿಸಿದ್ದೇವೆ
- 50 ಕೋಟಿಗೂ ಅಧಿಕ ಜನರಿಗೆ ರೂ.5 ಲಕ್ಷದವರೆಗಿನ ಉಚಿತ ಚಿಕಿತ್ಸೆಗಾಗಿ ಯೋಜನೆ ಪ್ರಾರಂಭಿಸಲಾಗಿದೆ

ಮುಂದಿನ 5 ವರ್ಷಗಳು
- ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಮಾಡಲಾಗುವುದು
- ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯನ್ನಾಗಿ ಮಾಡಲಾಗುವುದು
- 3 ಕೋಟಿಗೂ ಅಧಿಕ ಪಕ್ಕಾ ಮನೆಗಳ ನಿರ್ಮಾಣ ಮಾಡುತ್ತೇವೆ
- ಮನೆ ಮನೆಗೆ ಪೈಪ್‌ಗಳ ಮೂಲಕ ಅಡುಗೆ ಅನಿಲವನ್ನು ತಲುಪಿಸುತ್ತೇವೆ
- ಪಿಎಂ ಸೂರ್ಯಘರ್ ಯೋಜನೆಯಿಂದಾಗಿ ವಿದ್ಯುತ್ ಬಿಲ್ ಶೂನ್ಯ ಮಾಡುತ್ತೇವೆ
- ಗಗನಯಾನ ಯಶಸ್ಸಿನೊಂದಿಗೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಇತಿಹಾಸ ಸೃಷ್ಟಿಸುತ್ತೇವೆ
- ದೇಶಕ್ಕೆ ಬುಲೆಟ್ ಟ್ರೈನ್ ತರಲಿದ್ದೇವೆ
- ಹಿರಿಯ ನಾಗರೀಕರಿಗೂ ರೂ.5 ಲಕ್ಷದವರೆಗಿನ ಉಚಿತ ಚಿಕಿತ್ಸೆ ದೊರೆಯಲಿದೆ

ಮೋದಿ ಗ್ಯಾರಂಟಿ
ಸರಿಯಾದ ಉದ್ದೇಶ ಸರಿಯಾದ ಪರಿಣಾಮ
ಮತ್ತೊಮ್ಮೆ ಮೋದಿ ಸರ್ಕಾರ
ಕಮಲದ ಬಟನ್ ಒತ್ತಿ ಬಿಜೆಪಿಯನ್ನು ಗೆಲ್ಲಿಸಿ